ವಾರ್ಸ್, ಮ್ಯಾಜಿಕ್ ವಿಪ್, ಐಸ್‌ಕೋಲ್ಡ್, ಚಾಕೊಮೇನಿಯ, ಅನ್ನಾರ್, ಲಾಡಿಸ್, ಸ್ಕೈಶಾಟ್ ಎಂಬ ಹೊಸ ಬಗೆಯ ಪಟಾಕಿಗಳು ಮಾರುಕಟ್ಟೆಯಲ್ಲಿವೆ.

## ದೆವ್ವದ ದ್ರಾವಣ ಮತ್ತು ಫಟ್ ಫಟ್ ಪಟಾಕಿ

ಇತಿಹಾಸಕಾರ ಪಿ.ಕೆ. ಗೋಡ್ ಪ್ರಕಾರ ಪಟಾಕಿಗಳಲ್ಲಿ ಇರಬೇಕಾದ ಗನ್ ಪೌಡರ್‌ನ ಅನ್ವೇಷಣೆಯಾದದ್ದು ಚೀನೀಯರಿಂದ. ಕ್ರಿ.ಪೂ. 200ರಲ್ಲಿ ಚೀನೀಯರು ಹಸಿ ಬಿದಿರಿನ ಮೇಲೆ ಬರೆಯುತ್ತಿದ್ದರು. ಅದನ್ನು ಬೇಗ ಒಣಗಿಸಲು ಕಟ್ಟಿಗೆಯ ಉರಿ ಅಥವಾ ಬಿಸಿ ಕಲ್ಲಿದ್ದಲಿನ ಮೇಲೆ ಇಟ್ಟಾಗ ಕೆಲವೊಮ್ಮೆ ಹೆಚ್ಚು ಬಿಸಿಯಾಗಿ, ಊದಿಕೊಂಡು ಸಿಡಿದು ದೊಡ್ಡ ಸದ್ದು ಮಾಡುತ್ತಿತ್ತು. ಇದು ಜನರಿಗೆ ತೊಂದರೆ ಕೊಡುತ್ತಿದ್ದ ರಾಕ್ಷಸರನ್ನು ಹೆದರಿಸಿ ಓಡಿಸಲು ನೆರವಾಗುತ್ತಿತ್ತು. ಹೀಗೇ ಕೆಲವು ಶತಮಾನ ಕಳೆದಾದ ಮೇಲೆ ಕ್ರಿ.ಶ. 600–900ರ ವೇಳೆಗೆ ಚೀನಾದ ರಸಾಯನ ತಜ್ಞರು ಪೊಟ್ಯಾಶಿಯಂ ನೈಟ್ರೇಟ್ ಅನ್ನು ಗಂಧಕ ಮತ್ತು ಇದ್ದಿಲಿನ ಪುಡಿಗೆ ಸೇರಿಸಿದಾಗ ಗನ್ ಪೌಡರ್ ಸೃಷ್ಟಿಯಾಗಿ, ನೈಜ ಪಟಾಕಿಗೆ ಬೇಕಾದ ಕಚ್ಚಾವಸ್ತು ತಾನೇ ತಾನಾಗಿ ಸೃಷ್ಟಿಯಾಗಿಬಿಡುತ್ತಿದ್ದುದನ್ನು ಕಂಡುಕೊಂಡರು. ಆಕಸ್ಮಿಕವಾಗಿ ಅನ್ವೇಷಣೆಗೊಂಡ ರಾಸಾಯನಿಕ ಬೆಂಕಿ ತಗುಲಿದೊಡನೆ ದೊಡ್ಡ ಸದ್ದು ಮಾಡಿ ಸುತ್ತಮುತ್ತಲಿನವರಲ್ಲಿ ಭಯ ಹುಟ್ಟಿಸುತ್ತಿತ್ತು. ಭಾರೀ ಸದ್ದು ಮತ್ತು ಹೊಮ್ಮಿಸುತ್ತಿದ್ದ ಕ್ಷಿಪ್ರ ಬೆಳಕಿನಿಂದಾಗಿ ಅದನ್ನು 'ದೆವ್ವದ ದ್ರಾವಣ' ಎಂದೇ ಕರೆಯುತ್ತಿದ್ದರು. ಇದನ್ನೇ 'ಬೆಂಕಿ ಔಷಧಿ' ಎಂದು ಕರೆದ ಚೀನೀಯರು ಬಿದಿರಿನಲ್ಲಿ ತುಂಬಿ ಮೂತಿಗೆ ಬೆಂಕಿ ಇಟ್ಟು ಮನರಂಜನೆಯ ಪಟಾಕಿಗಳಂತೆ ಬಳಸತೊಡಗಿದರು. 11ನೇ ಶತಮಾನದಲ್ಲಿ ಸಾಂಪ್ರದಾಯಿಕ ಬ್ಯಾಂಬೂ ಸ್ಪಾರ್ಕ್ಲರ್‌ಗಳಂತೆ ಬಳಕೆಗೊಂಡ ಈ ತಂತ್ರಜ್ಞಾನ, ನಂತರದಲ್ಲಿ ಶತ್ರುಗಳ ಮೇಲೆ ದಾಳಿ ಮಾಡುವ ಅಸ್ತ್ರವಾಗಿ ಬದಲಾಯಿತು. ವ್ಯಾಪಾರಕ್ಕಾಗಿ ಚೀನಾಕ್ಕೆ ಹೋಗುತ್ತಿದ್ದ ಅರಬ್ಬರು ಅದನ್ನು ಯುರೋಪಿಗೆ ತಲುಪಿಸಿ ನಂತರ ಭಾರತಕ್ಕೂ ತಂದರು.

ನಮ್ಮಲ್ಲಿ ಪಟಾಕಿಯ ಬಳಕೆ ಕ್ರಿ.ಶ. 1400ರಿಂದ ಶುರುವಾಗಿರಬಹುದೆಂಬ ಅಂದಾಜಿದೆ. ಭಾರತದಲ್ಲಿ ಅದರ ಬಳಕೆ ಶುರುವಾಗಿದ್ದಕ್ಕೆ ಬೇಕಾದ ಸರಿಯಾದ ದಾಖಲೆ ಸಿಗುವುದು ವಿದೇಶಿ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ ನಂತರ ಬರೆದ ದಾಖಲೆಗಳಲ್ಲಿ. 1443ರಲ್ಲಿ ಎರಡನೇ ದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ ಅಬ್ದುಲ್ ರಜಾಕ್, ರಾಜಧಾನಿಯ ವೈಭವದ ಜೊತೆಗೆ 'ಬೀದಿಗಳಲ್ಲಿ ಹಾರಿಸುತ್ತಿದ್ದ ಪಟಾಕಿಗಳು ಮತ್ತು ಅವು ಉಂಟುಮಾಡುತ್ತಿದ್ದ ಸದ್ದುಗಳನ್ನು ಮರೆಯುವಂತೆಯೇ ಇಲ್ಲ' ಎಂದು ದಾಖಲಿಸಿದ್ದಾನೆ. ಅದೇ ಕಾಲಘಟ್ಟದಲ್ಲಿ ಭೇಟಿ ನೀಡಿದ್ದ ಇಟಲಿಯ ಪ್ರವಾಸಿಗ ಲುಡೊವಿಕೊಡಿ ವರ್ಥೆಮ, ವಿಜಯನಗರದ ಆನೆಗಳ ಗಾತ್ರ ಮತ್ತು ತಾಕತ್ತುಗಳನ್ನು ವರ್ಣಿಸುತ್ತ, 'ಇಂಥ ಬೃಹತ್ ಪ್ರಾಣಿಗಳನ್ನು ಮಂಡಿಯೂರುವಂತೆ ಮಾಡುವ ಶಕ್ತಿ ಇಲ್ಲಿನ ಜನರಿಗೆ ಹೇಗೆ ಸಿದ್ಧಿಸಿದೆಯೋ' ಎಂದು ಅಚ್ಚರಿಪಡುತ್ತ, 'ಬಹುಶಃ ಅವರು ಸಿಡಿಸುವ ಪಟಾಕಿ ಸದ್ದಿಗೆ ಹೆದರಿ ಅವು ಹೇಳಿದಂತೆ ಕೇಳುತ್ತಿರಬೇಕು' ಎಂದು ದಾಖಲಿಸಿದ್ದಾನೆ. ಮಧ್ಯಕಾಲೀನ ಭಾರತದ ರಾಜ ಮನೆತನಗಳು ಮನರಂಜನೆಗಾಗಿ, ಮದುವೆ, ರಾಜ್ಯಾಭಿಷೇಕ, ಯುದ್ಧ ಗೆದ್ದ ಖುಷಿಗೆ, ಮಗು ಹುಟ್ಟಿದ ಸಂಭ್ರಮಕ್ಕೆ ಪಟಾಕಿ ಸುಟ್ಟು ಸಂಭ್ರಮಿಸುತ್ತಿದ್ದುದನ್ನು ಇತಿಹಾಸಕಾರರು ದಾಖಲಿಸಿದ್ದಾರೆ.



## ಚಿಲಿಯ ಮಾನ ಕಳೆದ ಗೇಣುದ್ದದ ಪಟಾಕಿ

ರಿಯೋದಲ್ಲಿ ನಡೆಯುತ್ತಿದ್ದ 1990ರ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಕ್ವಾಲಿಫೈಯರ್ ಮ್ಯಾಚ್ ಬ್ರೆಜಿಲ್ ಮತ್ತು ಚಿಲಿಯ ನಡುವೆ ನಡೆಯುತ್ತಿತ್ತು. ಪಂದ್ಯಾವಳಿಯಲ್ಲಿ ಮುಂದುವರೆಯಲು ಚಿಲಿ ಪಂದ್ಯ ಗೆಲ್ಲಲೇಬೇಕಿತ್ತು. ಅರ್ಧ ಆಟ ಮುಗಿಯುವ ವೇಳೆಗೆ ಬ್ರೆಜಿಲ್ ಒಂದು ಗೋಲ್ ಹೊಡೆದು ಸುಸ್ಥಿತಿಯಲ್ಲಿತ್ತು. ಪಂದ್ಯದ 56ನೇ ನಿಮಿಷದಲ್ಲಿ ಚಿಲಿಯ ಗೋಲ್ ಕೀಪರ್ ರಾಬರ್ಟೊ ರೋಜಸ್ ಇದ್ದ ಕಡೆ ಪ್ರೇಕ್ಷಕರ ಕಡೆಯಿಂದ ರಾಕೆಟ್ ಪಟಾಕಿಯೊಂದು ಇದ್ದಕ್ಕಿದ್ದಂತೆ ನುಗ್ಗಿ ಸಿಡಿಯಿತು. ಪೆಟ್ಟುತಿಂದ ರೋಜಸ್ ಎರಡು ಮೂರು ದೂರ ಹಾರಿ ಮಕಾಡೆ ಬಿದ್ದುಬಿಟ್ಟ. ರೋಜಸ್ ತಲೆಯಿಂದ ರಕ್ತ ಧಾರೆ. ರೆಫ್ರಿ ವಿಶಲ್ ಊದಿ ಪಂದ್ಯಕ್ಕೆ ತಾತ್ಕಾಲಿಕ ವಿರಾಮ ನೀಡಿದ.

ಪಂದ್ಯ ಇನ್ನೇನು ರದ್ದಾಗಿಬಿಡುತ್ತದೆ ಎಂಬ ಆತಂಕ ಎದುರಾಯಿತು. ಹಾಗಾಗಿದ್ದರೆ ಎರಡೂ ತಂಡ ತಲಾ ಒಂದೊಂದು ಅಂಕಗಳಿಸುತ್ತಿದ್ದವು. ಚಿಲಿ ಸುಲಭವಾಗಿ ಮುಂದಿನ ಪಂದ್ಯಗಳಿಗೆ ಕ್ವಾಲಿಫೈ ಆಗುತ್ತಿತ್ತು. ರೋಜಸ್‌ಗೆ ಬೇಕಿದ್ದದ್ದೂ ಅದೇ. ಆ ನಡುವೆ ಅಲ್ಲಿ ನಿಜಕ್ಕೂ ಏನಾಯಿತೆಂದು ತಿಳಿಯಲು ಕ್ರೀಡಾ ಫೋಟೊಗ್ರಾಫರ್‌ಗಳು ತೆಗೆದ ಚಿತ್ರಗಳನ್ನು ಪರೀಕ್ಷಿಸಿದಾಗ, ರೋಜಸ್‌ಗೆ ಆದ ಗಾಯಕ್ಕೂ ಸಿಡಿದ ಪಟಾಕಿಗೂ ಸಂಬಂಧವೇ ಇರದೇ ಇದ್ದುದು ಸ್ಪಷ್ಟವಾಯಿತು. ಪಟಾಕಿ ಸಿಡಿದ ಆಘಾತದಿಂದ ಗಾಯಗೊಂಡಂತೆ ನಟಿಸಿದ ರೋಜಸ್ ತಾನೇ ತುಸುದೂರಕ್ಕೆ ಹಾರಿ ಬಿದ್ದಿದ್ದ. ಜನರಿಗೆ ಇದು ಗೊತ್ತಿರಲಿಲ್ಲ. ಬ್ರೆಜಿಲ್ ವಿರುದ್ಧ ಗೆಲ್ಲಲು ಅಸಾಧ್ಯ ಎಂದರಿತಿದ್ದ ರೋಜಸ್ ಹೇಗಾದರೂ ಮಾಡಿ ಪಂದ್ಯ ರದ್ದಾಗುವಂತೆ ನೋಡಿಕೊಂಡರೆ ಮತ್ತೊಂದು ಪಂದ್ಯ ಆಡಲು ಅವಕಾಶ ಸಿಗುತ್ತದೆ; ಆಗ ವಿಶ್ವಕಪ್‌ಗೆ ಕ್ವಾಲಿಫೈ ಆಗಬಹುದೆಂದು ಲೆಕ್ಕ ಹಾಕಿ ಜೇಬಿನಲ್ಲಿದ್ದ ಬ್ಲೇಡ್‌ನಿಂದ ಹಣೆಯ ಮೇಲೆ ಗಾಯ ಮಾಡಿಕೊಂಡು ಮೋಸದಾಟ ಆಡಿದ್ದ. ಇದನ್ನರಿತ ಆಯೋಜಕರು ರಾಬರ್ಟೊ ರೋಜಸ್‌ಗೆ ಆಜೀವ ನಿಷೇಧದ ಶಿಕ್ಷೆ ವಿಧಿಸಿದರು. ಪಂದ್ಯಾವಳಿಯಿಂದ ಚಿಲಿಯನ್ನು ಹೊರಹಾಕಿದ್ದಲ್ಲದೆ, 1994ರ ವಿಶ್ವಕಪ್‌ಗೂ ಪ್ರವೇಶ ನಿರಾಕರಿಸಲಾಯಿತು.

ಹಸಿರು ಪಟಾಕಿಯ ಗಾನಕ್ಕುಚಿ ಗ್ರಾಮ ಅಸ್ಸಾಂ ರಾಜ್ಯದ ಬಾರ್ಪೆಟಾ ಜಿಲ್ಲೆಯಲ್ಲಿ ಸಾಂಪ್ರದಾಯಿಕ ಮಹತ್ವದ ಗಾನಕ್ಕುಚಿ ಎಂಬ ಧಾರ್ಮಿಕ ಸ್ಥಳವಿದೆ. ಅಲ್ಲಿನ ಜನ ಕಳೆದ 136 ವರ್ಷಗಳಿಂದ ಕಡಿಮೆ ಮಾಲಿನ್ಯ, ಕಡಿಮೆ ಶಬ್ದ ಸೂಸುವ ಪಟಾಕಿಗಳನ್ನು ತಯಾರಿಸುತ್ತಿದ್ದಾರೆ. 'ಹೆಚ್ಚಿನ ರಾಸಾಯನಿಕಗಳನ್ನೊಳಗೊಳ್ಳದ ಈ ಪಟಾಕಿಗಳು ಭಾರೀ ಸ್ಫೋಟದ ಸದ್ದು ಮಾಡುವುದಿಲ್ಲ. ಹೊಗೆಯೂ ಕಡಿಮೆ' ಎನ್ನುವ ಮನೆತನದ ಹಿರಿಯ ಗೊಕುಜಿತ್ ಪಾಠಕ್, 'ನಾಲ್ಕು ತಲೆಮಾರುಗಳಿಂದ ನಾವು ಹಸಿರು ಪಟಾಕಿ ತಯಾರಿಸುತ್ತಿದ್ದೇವೆ, ಕೊಳ್ಳಲು ರಾಜಧಾನಿ ಗುಹಾವಟಿಯಿಂದಲೂ ವ್ಯಾಪಾರಿಗಳು ಬರುತ್ತಾರೆ. ಆದರೆ ನಾವು ಹಸಿರು ಪಟಾಕಿ ಎಂದು ಹೆಸರಿಟ್ಟಿಲ್ಲ ಅಷ್ಟೇ' ಎನ್ನುತ್ತಾರೆ. ಈ ಪಟಾಕಿಗಳನ್ನು ಅಸ್ಸಾಮೀ ಭಾಷೆಯಲ್ಲಿ 'ಟೋಬ್ರಾಸ್' ಎನ್ನುತ್ತಾರೆ.